# ಗೆದ್ದೇ ಗೆಲ್ಲುವೆ ಒಂದು ದಿನ ಗೆಲ್ಲಲೇ ಬೇಕು ಹೆಣ್ಣುತನ!

**ಹೆಣ್ಣು ಪರದೆಯ ಮೇಲೆ ಬಳುಕಲಷ್ಟೇ ಯೋಗ್ಯಳು ಎಂಬ ಗಾಂಧಿನಗರದ ಸ್ಥಾಪಿತ ಯೋಚನಾಲಹರಿಯನ್ನು ಆದರ ಒಳಗಿದ್ದುಕೊಂಡೇ ಒಡೆಯುವ ಹಂಬಲವುಳ್ಳ ಅಂಜಲಿ, ಚಿತ್ರರಂಗದ ಹೊಸಪೀಳಿಗೆಯ ಗಟ್ಟಿ ಸ್ತ್ರೀಧ್ವನಿಯಾಗಬಲ್ಲ ಶಕ್ತಿ ಹೊಂದಿರುವ ಹುಡುಗಿ.**

■ ಪದ್ಮನಾಭ ಭಟ್



ಚಿತ್ರರಂಗದತ್ತ ದೃಷ್ಟಿನೆಟ್ಟ ಬಹುತೇಕ ಹೆಣ್ಣುಮಕ್ಕಳಲ್ಲಿ ಇರುವ ಆಸೆ ನಟಿಯಾಗಬೇಕು ಎಂಬುದು. ಆದರೆ ಈ ಹುಡುಗಿಯ ಕಣ್ಣುಗಳಲ್ಲಿದ್ದ ಆಸೆ ಕೊಂಚ ಭಿನ್ನವಾಗಿತ್ತು. ಅವಳು ಬೆನ್ನತ್ತಿ ಹೊರಟಿದ್ದು ನಿರ್ದೇಶಕಿಯಾಗುವ ಕನಸನ್ನು. ಇದೇ ಕನಸಿನ ಚುಂಗು ಹಿಡಿದು ಗಾಂಧಿನಗರದ ಹಲವು ನಿರ್ದೇಶಕರು, ನಿರ್ಮಾಪಕ ಬಳಿ ಸಹಾಯಕ ನಿರ್ದೇಶಕಿಯಾಗಿ ಕೆಲಸ ಮಾಡುವ ಅವಕಾಶ ಕೋರಿ ಅಲೆದಳು. ಆದರೆ ಅವರಿಂದ ಬಂದ ಪ್ರತಿಕ್ರಿಯೆ ಮಾತ್ರ ಪ್ರೋತ್ಸಾಹದಾಯಕವಾಗಿರಲಿಲ್ಲ. ‘ಅಯ್ಯೋ, ಇಷ್ಟ್ ಚೆನ್ನಾಗಿದೀಯಾ. ಯಾಕಮ್ಮಾ ಡೈರೆಕ್ಟರ್ ಆಗ್ತೀನಿ ಅಂತೀಯಾ. ಅದು ಹೆಣ್ಣುಮಕ್ಕಳ ಕೈಲಿ ಆಗೋ ಕೆಲಸ ಅಲ್ಲ. ಸುಮ್ನೆ ಬಿಸಿಲಲ್ಲಿ ಕೆಲಸ ಮಾಡಿ ಟ್ಯಾನ್ ಆಗತ್ತೆ. ಆಕ್ಟಿಂಗ್ ಟ್ರೈ ಮಾಡು’. ‘ಹೆಣ್ಣುಮಕ್ಕಳ ಕೈಲಿ ಆಗೋ ಕೆಲಸ ಅಲ್ಲ’ ಎಂಬ ಮಾತು ಕೇಳಿದಾಗೆಲ್ಲ ಆ ಹುಡುಗಿಯ ಮನಸ್ಸು ಇನ್ನಷ್ಟು ಗಟ್ಟಿಯಾಗಿ ನಿಲ್ಲುತ್ತಿತ್ತು. ಕಣ್ಣುಗಳಲ್ಲಿ ಛಲದ ಸೆಲೆಯೊಡೆದು ಬರುತ್ತಿತ್ತು. ‘ಯಾಕಾಗಲ್ಲ ನೋಡೇ ಬಿಡೋಣ’ ಎಂದು ಪಣತೊಟ್ಟಳು. ಕೊನೆಗೆ ನಂದಕಿಶೋರ್ ಜೊತೆಗೆ ಕೆಲಸ ಮಾಡುವ ಅವಕಾಶ ಸಿಕ್ಕಿತು. ಅಲ್ಲಿ ಕೆಲಸ ಮಾಡಿದ್ದು ಎರಡೇ ವಾರ. ಆದರೆ ಅಷ್ಟರಲ್ಲಿ ತಾನು ಈ ಕೆಲಸ ಮಾಡಬಹುದು ಎಂಬ ವಿಶ್ವಾಸ ಸಿಕ್ಕಿತು.

ಅಂದು ನಿರ್ದೇಶನದ ಕನಸು ಹೊತ್ತು ಬಂದ ಹುಡುಗಿ ಅಂಜಲಿ ಅನೀಶ್, ಇಂದೂ ನಿರ್ದೇಶನದ ಕನಸನ್ನು ಎದೆಯಲ್ಲಿ ಕಾಪಿಟ್ಟುಕೊಂಡು ‘ಪದವಿಪೂರ್ವ’ ಸಿನಿಮಾದಲ್ಲಿ ನಾಯಕಿಯಾಗಿ ನಟಿಸುತ್ತಿದ್ದಾರೆ.

‘ನಂಗೆ ಈಗಲೂ ನಿರ್ದೇಶಕಿ ಆಗಬೇಕು ಎಂಬ ಕನಸೇ ಇದೆ. ಆದರೆ ನಟನೆಯ ಮೇಲೂ ಅಷ್ಟೇ ಇಷ್ಟ’ ಅನ್ನುತ್ತಾರೆ ಅಂಜಲಿ. ಮುಂಬೈನಲ್ಲಿ ಅನುಪಮ್ ಖೇರ್ ನಟನಾಶಾಲೆಯಲ್ಲಿ ನಟನೆಯ ಪಾಠ ಕಲಿತು ಬಂದಿರುವ ಅಂಜಲಿ, ‘ಅಂಬಿ ನಿಂಗ್ ವಯಸ್ಸಾಯ್ತೋ’ ಸೇರಿದಂತೆ ಕನ್ನಡ, ಹಿಂದಿಯ ಹಲವು ಸಿನಿಮಾಗಳಲ್ಲಿ ಸಹಾಯಕ ನಿರ್ದೇಶಕಿಯಾಗಿಯೂ ಕೆಲಸ ಮಾಡಿದ್ದಾರೆ.

‘ಹರಿಪ್ರಸಾದ್ ನಿರ್ದೇಶನದ ‘ಪದವಿಪೂರ್ವ’ ಕಥೆ ಕೇಳಿ ನಂಗೆ ತುಂಬ ಇಷ್ಟ ಆಯ್ತು. ನಾನು ಆರನೇ ತರಗತಿ ನಂತರ ಪಿಯುಸಿವರೆಗೆ ಹೋಮ್ ಸ್ಕೂಲಿಂಗ್ ಮಾಡಿದ್ದೆ. ಹಾಗಾಗಿ ಪಿಯುಸಿ ಕಾಲೇಜ್ ಲೈಫ್ ಮಿಸ್ ಮಾಡ್ಕೊಂಡಿದ್ದೆ. ಆದರೆ ‘ಪದವಿಪೂರ್ವ’ ಸಿನಿಮಾದ ಮೂಲಕ ಆ ಅನುಭವವನ್ನು ಮತ್ತೆ ಪಡೆದುಕೊಳ್ಳುತ್ತಿದ್ದೇನೆ’